## ವಿರಾಜಪೇಟೆಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ

***ಸಿ.ಸಿ ನಂಃ 348/2018***

ಪಿಡಬ್ಲ್ಯು-19
ಸಿಡಬ್ಲ್ಯು-37

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಎಂ ಮಹೇಶ್ |
| ತಂದೆಯ ಹೆಸರು | ಃ | ಮುದ್ದಪ್ಪ ದೇವರು |
| ವಯಸ್ಸು | ಃ | 47 ವರ್ಷ |
| ವೃತ್ತಿ | ಃ | ಪಿಒಡಿಸಿಐಬಿ ಮಡಿಕೇರಿ |
| ವಾಸಸ್ಥಳ | ಃ | ಮಡಿಕೇರಿ |

***ದಿನಾಂಕಃ 11.07.2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

ಸಾಕ್ಷಿಯ ಮುಖ್ಯ ವಿಚಾರಣೆಃ ಶ್ರೀ ಎಪಿಪಿಯವರಿಂದಃ-

ನಾನು ಜುಲೈ 2017 ರಿಂದ ಇಲ್ಲಿಯವರೆಗೆ ಡಿಸಿಐಬಿ ಮಡಿಕೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ7.8.17ರಂದು ಮುಂದಿನ ತನಿಖೆಯನ್ನು ಚಾಸಾಃ36 ರವರಿಂದ ಪಡೆದು 16.8.17 ರಂದು ಈ ಪ್ರಕರಣದ ಚಾಸಾಃ6 ರಿಂದ 8 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. 17.8.17 ರಂದು ಚಾಸಾಃ1 ರವರ ಮರು ಹೇಳಿಕೆ ಪಡೆದಿರುತ್ತೇನೆ. ಚಾಸಾಃ2 ರವರ ಮರು ಹೇಳಿಕೆ ಪಡೆದಿರುತ್ತೇನೆ. ದಿಃ22.8.17ರಂದು ಚಾಸಾಃ3 ಮತ್ತು 4 ರವರ ಹೇಳಿಕೆ ಪಡೆದಿರುತ್ತೇನೆ. 26.8.17ರಂದು ಆರೋಪಿತರ ಸ್ವಃಇಚ್ಛೆ ಹೇಳಿಕೆ ಮೇರೆಗೆ ಹೆಚ್ಚುವರಿ ಕಲಂಗಳನ್ನು ಸೇರಿಸಲು ನ್ಯಾಯಾಲಯದ ಅನುಮತಿ ಪಡೆದುಕೊಂಡಿರುತ್ತೇನೆ. ದಿಃ10.9.17 ರಂದು 2ನೇ ಆರೋಪಿತನು ನಿರೀಕ್ಷಣಾ ಜಾಮೀನು ಪಡೆದು ನನ್ನ ಮುಂದೆ ಹಾಜರಾದ ಮೇರೆಗೆ ಅವರ ಸ್ವಃಇಚ್ಛೆ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ23.10.17 ರಂದು ಕೃತ್ಯಕ್ಕೆ ಬಳಸಿದ ಲಾರಿಯನ್ನು ವಶಕ್ಕೆ ಪಡೆದಿರುತ್ತೇನೆ. ಚಾಸಾಃ28 ರವರು ವಾಹನವನ್ನು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ನಿಪಿ-29 ರಂತೆ ವಶಕ್ಕೆ ಪಡೆದಿರುತ್ತೇನೆ. ನನ್ನ ಸಹಿಯನ್ನು ನಿಪಿ-29ಬಿ ಎಂದು ಗುರುತಿಸಲಾಯಿತು. ದಿಃ27.10.17 ರಂದು ಮಾನ್ಯ ನ್ಯಾಯಾಲಯವು ನೀಡಿದ ಆದೇಶದಂತೆ ಲಾರಿಯನ್ನು ನಿಪಿ-26 ರಂತೆ ಮಾಲೀಕರಿಗೆ ವಾಹನ ಬಿಡುಗಡೆ ಮಾಡಿರುತ್ತೇನೆ. ಸಹಿಯನ್ನು ನಿಪಿ-26ಬಿ ಎಂದು ಗುರುತಿಸಲಾಯಿತು. ದಿಃ26.11.17ರಂದು ಸಾಕ್ಷಿದಾರರಾದ ಚಾಸಾಃ21 ಮತ್ತು 24 ರವರ ಹೇಳಿಕೆ ಪಡೆದಿರುತ್ತೇನೆ. ಅದೇ ದಿನ 3ನೇ ಆರೋಪಿ ನಿರೀಕ್ಷಣಾ ಜಾಮೀನು ಪಡೆದುಕೊಂಡು ನನ್ನ ಮುಂದೆ ಹಾಜರಾದ ಕಾರಣ ಅವರ ಸ್ವಃಇಚ್ಛೆ ಹೇಳಿಕೆ ಪಡೆದುಕೊಂಡಿರುತ್ತೇನೆ.

ದಿ:16.12.17 ರಂದು ಚಾಸಾ:1 ರವರು ನ್ಯಾಯಾಲಯದ ಆದೇಶದ ಮೇರೆಗೆ ವಶಪಡಿಸಿಕೊಂಡ ಕರಿಮೆಣಸನ್ನು ಚಾಸಾ:12 ಮತ್ತು 26 ರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ 104 ಚೀಲ ಕರಿಮೆಣಸನ್ನು ಬಿಡುಗಡೆ ಮಾಡಿರುತ್ತೇನೆ. ನಿಪಿ-3 ರಂತೆ ಮಹಜರನ್ನು ಮಾಡಿರುತ್ತೇನೆ. ಸಹಿಯನ್ನು ನಿಪಿ-3ಸಿ ಎಂದು ಗುರುತಿಸಲಾಯಿತು. ದಿ:21.1.18 ರಂದು ಸೊಸೈಟಿಯ ಆಡಳಿತ ಮಂಡಳಿಯ ಚಾಸಾ:5,10 ರಿಂದ 12,14 ಮತ್ತು 15 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿ:24.1.18 ರಂದು ಚಾಸಾ:13,9,15,18 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿ:23.2.18 ರಂದು 1ನೇ ಆರೋಪಿತನು ವಿಷ ಸೇವಿಸಿ ಆಸ್ಪತ್ರೆಗೆ ದಾಖಲಾದ ವಿಚಾರದಲ್ಲಿ ನಿಪಿ-30 ರಂತೆ ದೃಢೀಕರಣ ಪಡೆದಿರುತ್ತೇನೆ. ಸಹಿಯನ್ನು ನಿಪಿ-30ಬಿ ಎಂದು ಗುರುತಿಸಲಾಯಿತು. ನಿ:24.2.18 ರಂದು ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ. ನಿಪಿ-4 ರಿಂದ 8, ಮತ್ತು ನಿಪಿ-22ರಿಂದ 24 ರ ಛಾಯಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿತರು ನ್ಯಾಯಾಲಯದ ಮುಂದೆ ಇರುತ್ತಾರೆ.

ಪಾಟೀಸವಾಲು: ಶ್ರೀ ಡಿಸಿಡಿ ವಕೀಲರಿಂದ:'

ಚಾಸಾ:6 ರಿಂದ 8 ತಮ್ಮ ಕರಿಮೆಣಸು ಕಳ್ಳತನವಾದ ಬಗ್ಗೆ ಯಾವುದೇ ಲಿಖಿತ ಪುಕಾರು ನೀಡಿಲ್ಲ. ಚಾಸಾ:1 ಯಾವ ದಿನಾಂಕದಂದು ನಿಖರವಾಗಿ ಒಳ್ಳೆ ಮೆಣಸು ಕಳ್ಳತನವಾಗಿದೆ ಎಂದು ತಿಳಿಸಿಲ್ಲ. ದಿ:31.3.2017 ರಂದು ಚಾಸಾ:1 ರವರು ಸ್ಟಾಕ್ ಪರಿಶೀಲಿಸುವಾಗ ಒಳ್ಳೆ ಮೆಣಸು ಕಳ್ಳತನವಾದದ್ದು ಕಂಡು ಬಂದಿದೆ ಎಂದು ಮರುಹೇಳಿಕೆಯಲ್ಲಿ ಹೇಳಿದ್ದಾರೆ. ದಿ:1.4.2017 ರಂದು ಸದರಿಯವರು ಸಿದ್ದಾಪುರ ಠಾಣೆಗೆ ಪುಕಾರು ನೀಡಿರುತ್ತಾರೆ. ದಿ:3.3.2017 ಕ್ಕೆ ಚಾಸಾ:6 ಮತ್ತು 8 ರವರು ತಾವು ದಾಸ್ತಾನು ಇಟ್ಟ ಕರಿಮೆಣಸು ಹಿಂಪಡೆಯಲು ಹೋದಾಗ ಕರಿಮೆಣಸು ಕಳ್ಳತನವಾದ ವಿಚಾರ ಗೊತ್ತಾಯಿತು. ನಮ್ಮ ಒಳ್ಳೆಮೆಣಸು ಕಾಣುತ್ತಿಲ್ಲ ಎಂದು ಚಾಸಾ:6 ಮತ್ತು 8 ಅದೇ ದಿನ ಅಂದರೆ 3.3.2017ರಂದು ಚಾಸಾ:1 ರವರ ಗಮನಕ್ಕೆ ತಂದಿದ್ದಾರೆ. ಸದರಿಯವರು ಹೇಳಿಕೆ ನೀಡುವ ಸಂದರ್ಭದಲ್ಲಿ ಕರಿಮೆಣಸು ಕಳ್ಳತನವಾದ ವಿಚಾರ ಅವರ ಗಮನಕ್ಕೆ ಇತ್ತು ಎಂದರೆ ಸರಿ . 1.4.2017 ರವರೆಗೆ ಏಕೆ ಚಾಸಾ:1 ರವರು ದೂರನ್ನು ನೀಡಲಿಲ್ಲ ಎಂಬ ಬಗ್ಗೆ ಸಮಜಾಯಿಷಿಕೆಯನ್ನು ಕೊಟ್ಟಿಲ್ಲ. ಕರಿಮೆಣಸಿನೊಂದಿಗೆ ಚಾಸಾ:1 ರವರ ಸಂಸ್ಥೆಯಲ್ಲಿ ಸುಮಾರು 5 ಲಕ್ಷದಷ್ಟು ಗೊಬ್ಬರ ಕೂಡ ಅವ್ಯಹಾರವಾದ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ಚಾಸಾ:1 ರವಗಾಗಲೀ ಸಂಸ್ಥೆಯ ಸಿಬ್ಬಂ ದಿಯವರಾಗಲೀ ಗೊಬ್ಬರ ಕಾಣೆಯಾದ ಬಗ್ಗೆ ಯಾರೂ ದೂರು ನೀಡಿಲ್ಲ. ಸಂಸ್ಥೆಯ ವಾರ್ಷಿಕ ವರ ದಿಯ ಪ್ರತಿ ಪಡೆದಿದ್ದೇನೆ. ವಾರ್ಷಿಕ ವರದಿಯಲ್ಲಿ ಗೊಬ್ಬರ ಅವ್ಯವಹಾರವಾದ ಬಗ್ಗೆ ನಮೂದು ಇದೆ ಎಂದರೆ ನನಗೆ ಮಾಹಿತಿ ಇಲ್ಲ. ನಾನು ಸದರಿ ದಾಖಲಾತಿ ಪಡೆದಿಲ್ಲ. ನನ್ನ ಹಿಂದಿನ ತನಿಖಾಧಿಕಾರಿ ಸದರಿ ದಾಖಲಾತಿ ಪಡೆದಿದ್ದರು. ಕರಿಮೆಣಸನ್ನು ಚಾಸಾ:1 ಮತ್ತು ಅವರ ಸಿಬ್ಬಂದಿಯವರೇ ಕರಿಮೆಣಸನ್ನು ಅವ್ಯವಹಾರ ಮಾಡಿದ್ದು ಗೊತ್ತಿದ್ದರೂ ಆರೋಪಿತನ ವಿರುದ್ದ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಕರಿಮೆಣಸು 2ನೇ ಆರೋಪಿತನಿಗೆ ಸಂಬಂದಿಸಿದ್ದು ಅದನ್ನು ಅವನ ಗೊಡೌನ್‌ನಿಂದ ಅಕ್ರಮವಾಗಿ ಪಡೆದಿದ್ದೇನೆ ಎಂದರೆ ಸರಿಯಲ್ಲ. 2ನೇ ಆರೋಪಿ ಬೆಳೆಗಾರರಿಂದ

ಪಡೆದ ಮೆಣಸನ್ನು ಶೇಖರಿಸಿಟ್ಟಿದ್ದ ಎಂದರೆ ಸರಿಯಲ್ಲ. ಚಾಸಾ:1 ರವರೊಂದಿಗೆ ಶಾಮೀಲಾಗಿ ಆರೋಪಿತರ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ

(ಶಿವಾನಂದ್ ಲಕ್ಷ್ಮಣ್ ಅಂಚಿ)
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ವಿರಾಜಪೇಟೆ